
# ವಿಶ್ವದ ಬೃಹತ್ ವಿಷ್ಣು ದೇವಾಲಯ, ಕಾಂಬೋಡಿಯ

## ಕಾಂಬೋಡಿಯ ಪ್ರವಾಸ.... ಒಂದು ಅನನ್ಯ ಅನುಭವ



ಕಾಂಬೋಡಿಯ ದೇಶದ ಸಿಮ್ ರೀಪ್ ಎಂಬಲ್ಲಿನ 'ಆ್ಯಂಗೋರ್ ವಾಟ್' ದೇವಾಲಯವಿದೆ. ಇದು ಒಂಭತ್ತು ಶತಮಾನಗಳಿಗೂ ಪುರಾತನವಾದ ಭವ್ಯ ದೇವಾಲಯ. 'ಆ್ಯಂಗೋರ್' ಎಂದರೆ ದೇವಾಲಯ. 'ವಾಟ್' ಎಂದರೆ ನಗರ. ಇದೇ ಕಾಂಬೋಡಿಯ ದೇಶದ ಪ್ರಮುಖ ಆಕರ್ಷಣೆ. ಜಗತ್ತಿನ ಶಿಲ್ಪ ವಿಸ್ಮಯಗಳಲ್ಲೊಂದಾದ ಇದು ಯುನೆಸ್ಕೊದ ವಿಶ್ವ ಪರಂಪರೆಗೆ ಸೇರಿದೆ. ಕಾಂಬೋಡಿಯ ದೇಶದ ರಾಷ್ಟ್ರಧ್ವಜ ಮತ್ತು ಅಲ್ಲಿನ ಕರೆನ್ಸಿ ನೋಟ್‌ನ ಮೇಲೆ ಕೂಡ ವಿರಾಜಮಾನ. ಚೀನಾ ದೇಶದ ಮಹಾಗೋಡೆಯಂತೆ (ಗ್ರೇಟ್ ವಾಲ್ ಆಫ್ ಚೈನಾ) ಚಂದ್ರನ ಮೇಲೆ ನಿಂತು ನೋಡಬಹುದಾದ ಮಾನವ ನಿರ್ಮಿತ ಅದ್ಭುತ ರಚನೆಗಳ ಪೈಕಿ 'ಆ್ಯಂಗೋರ್ ವಾಟ್' ಸಹ ಒಂದು. ಕಾಂಬೋಡಿಯಾದ ಎರಡು ಪ್ರಮುಖ ನದಿಗಳಾದ ಮೆಕಾಂಗ್ ಮತ್ತು ಸ್ರೆಪೋಕ್ ಹೆಚ್ಚಿನ ಪ್ರಮಾಣದಲ್ಲಿ ಫಲವತ್ತಾದ ಮಣ್ಣನ್ನು ತಂದು ಹಾಕಿ ಬೇಸಾಯವನ್ನು ಸರಾಗವಾಗಿಸಿವೆ. ಇಲ್ಲಿನ ಸಿಹಿ ಅನ್ನದ ರುಚಿ ಪ್ರವಾಸಿಗರಿಗೆ ಪ್ರಿಯವೆನ್ನಿಸುತ್ತದೆ. ಅಂತೆಯೇ ಮಾನವ ನಿರ್ಮಿಸಿದ ವಿಶಾಲ ಸಿಹಿನೀರಿನ ಸರೋವರ. 'ಟೋನ್ಲಿ ಸ್ಯಾಪ್' ಕಾಂಬೋಡಿಯಾದಲ್ಲಿದೆ. 'ಆ್ಯಂಗೋರ್ ವಾಟ್' ವಿಷ್ಣು ದೇವಾಲಯವನ್ನು ಹನ್ನೆರಡನೇಯ ಶತಮಾನದಲ್ಲಿ ಖಮೇ ಸಾಮ್ರಾಜ್ಯದ ಅರಸ ಎರಡನೇ ಸೂರ್ಯವರ್ಮ ಕಟ್ಟಿಸಿದ. ಈ ದೇವಾಲಯ ಹಿಂದೂ ದೇವತೆಗಳ ನೆಲೆಯಾದ ಮೇರು ಪರ್ವತವನ್ನು ಪ್ರತಿನಿಧಿಸುತ್ತದೆ.



ಜಲಾವೃತ ಪ್ರವೇಶದ ಕಂದಕದ ಮಧ್ಯದಲ್ಲಿ ದ್ವೀಪದಂತೆ 'ಆ್ಯಂಗೋರ್ ವಾಟ್' ನಿರ್ಮಿಸಲಾಗಿದೆ. ಸುತ್ತ ಮೂರೂವರೆ ಕಿ.ಮೀ. ಉದ್ದದ ಗೋಡೆಯಿದೆ. ಗೋಡೆಯ ಮೇಲೆ ಪುರಾಣ, ಇತಿಹಾಸಕ್ಕೆ ಸಂಬಂಧಿಸಿದ ಕೆತ್ತನೆಗಳಿವೆ. ಒಂದೆಡೆಯಂತು ಡೈನಾಸರ್ ಮುಂತಾದ ದೈತ್ಯ ಸರೀಸೃಪಗಳ ಕೆತ್ತನೆಗಳು ಗಾಢವಾಗಿ ನಮ್ಮ ಕುತೂಹಲ ಕೆರಳಿಸುತ್ತವೆ. ಒಂದಾನೊಂದು ಕಾಲದಲ್ಲಿ ಮಾನವ ಅವುಗಳೊಂದಿಗೆ ಸಹಬಾಳ್ವೆ ನಡೆಸಿದ್ದನೆ ಎಂಬ ಭಾವನೆ ಮೂಡಿಸುತ್ತದೆ. ದ್ರಾವಿಡ ಶೈಲಿಯಲ್ಲಿರುವ 'ಆ್ಯಂಗೋರ್ ವಾಟ್' ಮೂರು ಆಯಾಕಾರದ ಗ್ಯಾಲರಿಗಳಿವೆ. ಗ್ಯಾಲರಿಯನ್ನು ದೈತ್ಯ ಸರ್ಪ ಸುತ್ತುವರಿದಂತಿವೆ. ದೇಗುಲದ ಮಧ್ಯದಲ್ಲಿ ಗೋಪುರಗಳ ಪಂಚಕ ವಿನ್ಯಾಸ ವಿಶೇಷವಾಗಿ ಪ್ರವಾಸಿಗರನ್ನು ಗಮನ ಸೆಳೆಯುತ್ತದೆ.



ಸಮೀಪದಲ್ಲೇ 12–13ನೆಯ ಶತಮಾನದಲ್ಲಿ ಏಳನೇಯ ಜಯವರ್ಮ ಕಟ್ಟಿಸಿದ ಬಯಾನ್ ದೇವಾಲಯ ವಿಶಿಷ್ಟವಾಗಿದೆ. ಅದರ ರಚನೆಯಲ್ಲಿ 54 ಗೋಪುರಗಳಿವೆ, 216 ಬೃಹತ್ತಾದ ಮಾನವ ಮುಖಗಳುಳ್ಳ ಶಿಲೆಗಳಿವೆ. ಈ ಮುಖಗಳು ಅವಲೋಕಿತೇಶ್ವರನದೋ ಅಥವಾ ಸ್ವತಃ ದೊರೆ ಜಯವರ್ಮನದೊ ಚರ್ಚಾಸ್ಪದವಾಗಿದೆ. ಸ್ಮಾರಕಗಳು ಮತ್ತಷ್ಟು ಶಿಥಿಲಗೊಳ್ಳುವುದನ್ನು ನಿವಾರಿಸಲೆಂದೇ ಹೆಮ್ಮರಗಳು ಅವನ್ನು ತೂರಿ ಬೆಳೆದಿವೆ. ಹೆಮ್ಮರದೊಳಗೆ ದೇಗುಲವೋ, ದೇಗುಲದೊಳಗೆ ಹೆಮ್ಮರವೋ ಎಂಬ ಭಾವನೆ ಮೂಡುತ್ತದೆ. ಎತ್ತ ನೋಡಿದರೂ ನಯನ ಮನೋಹರವಾದ ಶಿಲ್ಪಾವಶೇಷಗಳೇ.

ಕಾಂಬೋಡಿಯ ದೇಶವು ಲಾವೋಸ್, ವಿಯಟ್ನಾಂ ಥಾಯ್‌ಲ್ಯಾಂಡ್ ಈ ಮೂರೂ ದೇಶಗಳ ಮಧ್ಯದಲ್ಲಿದೆ. ಕಾಂಬೋಡಿಯಾದಲ್ಲಿ ತಂಗಲು ಸುಸಜ್ಜಿತವಾದ ಹೋಟೆಲ್‌ಗಳು ಸಾಲು ಸಾಲಾಗಿವೆ. ಈ ದೇಶಕ್ಕೆ ಪ್ರವಾಸ ಕೈಗೊಳ್ಳಲು ಪಾಸ್ ಪೋರ್ಟ್ ಮತ್ತು ವೀಸಾ ಅಗತ್ಯ. ಇಲ್ಲಿ ಇಂಗ್ಲೀಷ್ ಬಲು ಕಡಿಮೆ. ಆದರೆ ಮಾರ್ಗದರ್ಶಕರು ಸೊಗಸಾಗಿದೆ ಇಂಗ್ಲೀಷ್‌ನಲ್ಲೇ ವಿವರಣೆ ನೀಡುತ್ತಾರೆ. ಮತ್ತೊಂದು ವಿಶೇಷವೆಂದರೆ ನಶಿಸುತ್ತಿರುವ ಸಂಸ್ಕೃತ ಭಾಷೆಯ ಬಳಕೆ ರೂಢಿಯಲ್ಲಿದೆ. ಇದು ನಿಜಕ್ಕೂ ಹೆಮ್ಮೆಯ ಸಂಗತಿ.

ಪ್ರವಾಸಿಗರನ್ನು ಹೆಚ್ಚಾಗಿ ಆಕರ್ಷಿಸುವ ಥಾಯ್ ಶೈಲಿಯ ನೃತ್ಯ ಹಾಗೂ ಆಯುರ್ವೇದ ಪದ್ಧತಿಯ ಮಸಾಜ್ ಪಾರ್ಲರ್‌ಗಳು ವಿಪುಲವಾಗಿವೆ (ಹೇರಳವಾಗಿವೆ). ಈ ಪ್ರವಾಸವು ಪ್ರಾಚೀನ ವೈಭವದ ಭಾಷನ್ನು ಆಧುನಿಕ ಪರಿಸರದಲ್ಲಿ ನೀಡುತ್ತದೆ.


Orchid Travel & Tours

# 98, 1st Floor, D.V.G. Road, Basavanagudi, Bangalore - 560 004.

Tel : 26670646, 26621983, Mob. 9880079588

www.orchidtravels.net